# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

## ಸಿ.ಸಿ. ಸಂಖ್ಯೆ: 520/2025

ಪ್ರಾಸಾ – 9

ಚಾಸಾ – 8

**ಸಾಕ್ಷಿಯು ದಿಃ 29.01.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಮಂಜು |
| ತಂದೆಯ ಹೆಸರು | : | ಮಾದನಾಯಕ |
| ವಯಸ್ಸು | : | 32 ವರ್ಷ |
| ವೃತ್ತಿ | : | ಹೋಟೆಲ್ ಕೆಲಸ |
| ವಾಸಸ್ಥಳ | : | ಹಂಗಳ ಗ್ರಾಮ |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :–**

ನಾನು ಬೆಂಗಳೂರಿನ ಯಶ್ವಂತಪುರದಲ್ಲಿ ಹೋಟೆಲ್ ಕೆಲಸ ಮಾಡಿಕೊಂಡಿದ್ದೇನೆ. ಚಾಸಾ 1 ರಿಂದ 7 ನನಗೆ ಗೊತ್ತು. ದಿಃ 27.06.2019 ರಂದು ರಾತ್ರಿ ವೇಳೆಯಲ್ಲಿ ಚಾಸಾ 1 ರವರಿಗೆ ಸೇರಿದ ಗೂಡ್ಸ್ ವಾಹನದಲ್ಲಿ ನಾನು ಬೆಂಗಳೂರಿನ ಯಶ್ವಂತಪುರದಿಂದ ಹಂಗಳಕ್ಕೆ ಮನೆ ಸಾಮಾನುಗಳನ್ನು ತುಂಬಿಕೊಂಡು ನಾನು ಹಂಗಳಕ್ಕೆ ಬರುವಾಗ, ಚಾಸಾ 1 ರಿಂದ ಚಾಸಾ 7 ರವರು ಹಾಗೂ ಮೃತ ಸೋನು ರವರು ಬೊಮ್ಮಲಾಪುರದ ಅವರ ಸಂಬಂಧಿ ತಿರಿಕೊಂಡಿದ್ದಾರೆ ಎಂದು ನಾನು ಸಾಮಾನು ತುಂಬಿಕೊಂಡು ಬರುತ್ತಿದ್ದ ವಾಹನದಲ್ಲಿಯೇ ಬರುತ್ತಿದ್ದರು. ಆಗ ಗುಂಡ್ಲುಪೇಟೆಯ ಸುರಭಿ ಹೋಟೆಲ್ ಸಮೀಪ ಬಂದಾಗ ದಿಃ 28.06.2019 ರಂದು ಬೆಳಗಿನ ಜಾವ 5.15ರ ಸಮಯದಲ್ಲಿ

ಎದುರುಗಡೆಯಿಂದ ಇಚರ್ ಟೆಂಪೋ ಅತಿ ವೇಗವಾಗಿ ಬಂದು ನಾವು ಹೋಗುತ್ತಿದ್ದ ಗೂಡ್ಸ್ ಆಟೋಗೆ ಡಿಕ್ಕಿ ಪಡಿಸಿರುತ್ತದೆ. ಅದರಿಂದ ಚಾಸಾ 1 ರಿಂದ 7 ರವರಿಗೆ ಮತ್ತು ನನಗೆ ಸಣ್ಣ ಪುಟ್ಟ ಗಾಯಗಳಾಗಿದ್ದು, ಸೋನು ರವರಿಗೆ ತಲೆಗೆ ತೀರ್ವ ತರದ ಪೆಟ್ಟಾಗಿತ್ತು. ನಂತರ ಅವರನ್ನು ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುತ್ತಾರೆ.

2. ನಮಗೆ ಡಿಕ್ಕಿ ಪಡಿಸಿದ ವಾಹನ ಸಂಖ್ಯೆ 5823 ಆಗಿರುತ್ತದೆ. ನಮಗೆ ಅಪಘಾತ ಪಡಿಸಿದ ವಾಹನದ ಚಾಲಕ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಿದ್ದು ಗುರ್ತಿಸುವಿಕೆಯ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದ ಕಾರಣ ವಿನಾಯಿತಿ ಅರ್ಜಿಯನ್ನು ಪುರಸ್ಕರಿಸಲಾಯಿತು. ನಮಗೆ ಅಪಘಾತ ಪಡಿಸಿದ ವಾಹನ ಎಂದು ನಿಪಿ 2 ಮತ್ತು 3 ಫೋಟೋದಲ್ಲಿರುವ ವಾಹನವನ್ನು ನೋಡಿ ಗುರುತಿಸಿರುತ್ತಾರೆ. ನಿಪಿ 6 ಮತ್ತು 7 ಫೋಟೋದಲ್ಲಿರುವ ವಾಹನ ತಾವು ಹೋಗುತ್ತಿದ್ದೆವು ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆರೋಪಿಯು ಅತಿ ವೇಗವಾಗಿ ವಾಹನ ಚಲಾಯಿಸಿರುವುದರಿಂದ ಅಪಘಾತವಾಗಿರುತ್ತದೆ.

**ಪಾಟೀ ಸವಾಲು :- ಆರೋಪಿ ಪರ ವಕೀಲರಿಂದ**

ಆ ದಿನ ನಾವು ರಾತ್ರಿ 10.00 ಗಂಟೆಗೆ ಬೆಂಗಳೂರಿನಿಂದ ಹೊರಟಿರುತ್ತೇವೆ. ನಾವು ಗುಂಡ್ಲುಪೇಟೆಗೆ ಬಂದಾಗ ಬೆಳಗಿನ ಜಾವ 5.15 ರಿಂದ 5.30 ಗಂಟೆ ಸಮಯವಾಗಿತ್ತು. ಬೆಂಗಳೂನರಿನಿಂದ ಬರಲು ಅಷ್ಟು ಸಮಯವಾಗಿತ್ತಾ ಎಂದರೆ ಸಾಕ್ಷಿಯು ರಾತ್ರಿ ಸಮಯವಾಗಿತ್ತು, ವಾಹನದಲ್ಲಿ ಸಾಮಾನುಗಳು ತುಂಬಿದ್ದರಿಂದ ವಾಹನ ನಿಧಾನವಾಗಿ ಬಂದಿತ್ತು ಎಂದು ನುಡಿಯುತ್ತಾರೆ. ಟೋಲ್ ಗಳಲ್ಲಿ ಸಮಯ ತೆಗೆದುಕೊಂಡಿದ್ದರಿಂದ ನಾವು ನಿಧಾನವಾಗಿ ಬಂದಿದ್ದೇವೆ. ಸಾಮಾನ್ಯವಾಗಿ ಬೆಳಿಗ್ಗೆ 5.00 - 5.15 ಗಂಟೆ

ಸಮಯದಲ್ಲಿ ಆಟೋದಲ್ಲಿದ್ದವರು ಎಲ್ಲರೂ ನಿದ್ರೆಯ ಮುಂಪರ್ ನಲ್ಲಿ ಇದ್ದೆವು ಎಂದರೆ ಸಾಕ್ಷಿಯು ಎಲ್ಲರೂ ನಿದ್ರೆ ಮಾಡುತ್ತಿರಲಿಲ್ಲ, ನಾನು ಎಚ್ಚರವಾಗಿದ್ದೆ, 2-3 ಜನ ನಿದ್ರೆಯ ಮುಂಪರ್ ನಲ್ಲಿ ಇದ್ದರು ಎಂದು ನುಡಿಯುತ್ತಾರೆ. ನಾವು ಆಟೋದಲ್ಲಿ ಒಟ್ಟು 9 ಜನರಿದ್ದೆವು. ನಾನು ಆಟೋದ ಹಿಂಭಾಗದಲ್ಲಿ ಕುಳಿತಿದ್ದೆ. ಆಟೋದ ಹಿಂಭಾಗದಲ್ಲಿ ನಾನು, ಚಾಸಾ 1 ಮತ್ತು 4 ರವರು ಕುಳಿತಿದ್ದೆವು. ಆಟೋದ ಮುಂಭಾಗದಲ್ಲಿ ಚಾಸಾ 3, ಚಾಸಾ 7 ಹಾಗೂ ಸೋನು ರವರು ಕುಳಿತಿದ್ದರು. ನಾನು ಆಟೋದ ಮುಂದಕ್ಕೆ ಮುಖ ಮಾಡಿ ಕುಳಿತಿದ್ದೆ. ನಾನು ಆಟೋದ ಹಿಂಭಾಗದಲ್ಲಿ ಕುಳಿತಿದ್ದರಿಂದ ಮುಂಭಾಗದಲ್ಲಿ ಯಾವ ವಾಹನಗಳು ಯಾವ ರೀತಿ ಬರುತ್ತವೆ ಎಂದು ನನಗೆ ಕಾಣುತ್ತಿರಲಿಲ್ಲ ಎಂದರೆ ಸರಿ.

2. ಸುರಭಿ ಹೋಟೆಲ್ ಮುಂದಿನ ಅಪಘಾತ ಸ್ಥಳದ ರಸ್ತೆಯ ಅಗಲ ನನಗೆ ಹೇಳಲಾಗುವುದಿಲ್ಲ. ಸುರಭಿ ಹೋಟೆಲ್ ಬೆಂಗಳೂರು ನಿಲಗಿರಿ ರಸ್ತೆಯಲ್ಲಿ ಇರುವುದರಿಂದ ಬೆಳಗಿನ ಜಾವ 5.00 ರಿಂದ 5.30ರ ಸಮಯದಲ್ಲಿ ವಾಕಿಂಗ್ ಮಾಡುವವರು ಮತ್ತು ವಾಹನಗಳ ದಟ್ಟನೆ ಇರುತ್ತದೆ ಎಂದರೆ ಸಾಕ್ಷಿಯು ವಾಹನಗಳು ಇರಬಹುದು, ವಾಕಿಂಗ್ ಮಾಡುವವರು ನನಗೆ ಕಂಡಿಲ್ಲ ಎಂದು ನುಡಿಯುತ್ತಾರೆ. ಸುರಭಿ ಹೋಟೆಲ್ ಮುಂಭಾಗ ಮಣ್ಣಿನ ರಸ್ತೆ ಇದ್ದು ಅದಾದ ನಂತರ ಮುಖ್ಯ ಡಾಂಬರ್ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ಮಣ್ಣಿನ ರಸ್ತೆಯಲ್ಲಿ ವಾಹನಗಳು ನಿಂತಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ವಾಹನವು ಸದರಿ ಮಣ್ಣಿನ ರಸ್ತೆಯಲ್ಲಿ ನಿಂತಿದ್ದು ನಮ್ಮ ವಾಹನದ ಚಾಲಕ ವೇಗವಾಗಿ ವಾಹನ ಚಲಾಯಿಸಿಕೊಂಡು ಬಂದು ನಿಂತಿದ್ದ ವಾಹನಕ್ಕೆ ಡಿಕ್ಕಿಪಡಿಸಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ವಾಹನವು ವೇಗವಾಗಿ ಓವರ್ ಟೇಕ್ ಮಾಡಲು ಬಂದು ನಮ್ಮ ವಾಹನಕ್ಕೆ ಡಿಕ್ಕಿಪಡಿಸಿದ್ದಾರೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಆರೋಪಿಯ ವಾಹನವು ವೇಗವಾಗಿ ಬಂದಿಲ್ಲ ಮತ್ತು ಓವರ್ ಟೇಕ್ ಮಾಡಲು ಬಂದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಾಹನ ವೇಗವಾಗಿ ಬಂದಿರುತ್ತದೆ ಆದರೆ ಅದರ ವೇಗದ ಮಿತಿಯನ್ನು ಹೇಳಲು ಆಗುವುದಿಲ್ಲ. ಅಪಘಾತಪಡಿಸಿದ ವಾಹನದ ಸಂಪೂರ್ಣ ಸಂಖ್ಯೆ ನನಗೆ ಗೊತ್ತಿಲ್ಲ

ಎಂದರೆ ಸಾಕ್ಷಿಯು ಪೂರ್ತಿ ನಂಬರ್ ಗೊತ್ತಿಲ್ಲ ಆದರೆ ಅದರ ಸಂಖ್ಯೆ 5823 ಆಗಿರುತ್ತದೆ. ಚಾಸಾ 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಚಾಸಾ 1 ರಿಂದ 14 ರಾದ ನಾವುಗಳು ಹಂಗಳ ಗ್ರಾಮದವರು ಮತ್ತು ಒಂದೇ ಸಮುದಾಯಕ್ಕೆ ಸೇರಿದ್ದವು ಎಂದರೆ ಸರಿ. ದೂರಿನಲ್ಲಿ ಮಂಜು ಬಿನ್ ನಾಗನಾಯಕ ಎಂದು ನಮೂದಾಗಿದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ನಾಗನಾಯಕನ ಬದಲಾಗಿ ಮಾದನಾಯಕ ಎಂದು ಬರೆಯಬೇಕು ಎಂದು ಹೇಳಿದ್ದೆ ಆದರೆ ಬರೆಯಲಿಲ್ಲ ಎಂದು ನುಡಿಯುತ್ತಾರೆ. ದೂರಿನಲ್ಲಿ ಮಂಜು ಬಿನ್ ನಾಗನಾಯಕ ಎಂದು ಬರೆದಿರುವುದರಿಂದ ಮಂಜು ಬಿನ್ ಮಾದನಾಯಕನಾದ ನಾನು ಆ ದಿನ ವಾಹನದಲ್ಲಿ ಇರಲೇ ಇಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಬದಲಾಗಿರುವ ಬಗ್ಗೆ ನನ್ನ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರಿಂದ 14 ರವರು ನಮ್ಮ ಗ್ರಾಮದವರಾದ ಕಾರಣ ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ